ವಿದ್ಯುತ್ ಕೊರತೆ

30 : (61)

ಶ್ರೀ ಸತ್ಯನಾರಾಯಣ.ಎಂ. (ಚಾಮುಂಡೇಶ್ವರಿ)

ಅ) ರಾಜ್ಯವು ತೀವ್ರ ವಿದ್ಯುತ್ ಕೊರತೆಯನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ವಿದ್ಯುತ್ ಕೊರತೆಯನ್ನು ಬಗೆಹರಿಸಲು ಸರ್ಕಾರವು ಏನು ಕ್ರಮ ಕೈಗೊಂಡಿದೆ; ಹಾಗೂ ಯಾವ ಯಾವ ಯೋಜನೆ/ಮೂಲಗಳಿಂದ ವಿದ್ಯುತ್ ಉತ್ಪಾದನೆ ಮಾಡಲಾಗುವುದು (ವಿವರ ನೀಡುವುದು);

ಇ) ರಾಜ್ಯದಲ್ಲಿ ವಿದ್ಯುತ್ ಕೊರತೆಯಿರುವುದರಿಂದ ರೈತರ ಪಂಪ್ ಸೆಟ್‌ಗಳಿಗೆ ಸರಿಯಾಗಿ ವಿದ್ಯುತ್ ಪೂರೈಕೆಯಾಗದಿರುವುದರಿಂದ ಆಹಾರ ಉತ್ಪಾದನೆಯು ದಿನೇ ದಿನೇ ಕಡಿಮೆಯಾಗುತ್ತಿದ್ದು ರಾಜ್ಯದ ಆರ್ಥಿಕ ಪರಿಸ್ಥಿತಿ ಬಹಳಷ್ಟು ಕುಸಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು ಹಾಗೂ ಈ ಬಗ್ಗೆ ಏನು ಕ್ರಮ ಕೈಗೊಳ್ಳಲಾಗಿದೆ (ಮಾಹಿತಿಯನ್ನು ನೀಡುವುದು);

ಶ್ರೀ ಜಗದೀಶ್ ಶೆಟ್ಟರ್(ಮುಖ್ಯಮಂತ್ರಿಗಳು)

ಅ) ಹೌದು. ಬಂದಿರುತ್ತದೆ.

ಆ) ಪ್ರಸ್ತುತ, ವಿದ್ಯುತ್ ಕೊರತೆಯನ್ನು ಸ್ವಲ್ಪಮಟ್ಟಿಗೆ ನೀಗಿಸಲು ಅಲ್ಪಾವಧಿ ಕ್ರಮವಾಗಿ ವಿದ್ಯುತ್‌ನ್ನು ಖಾಸಗಿ ವಿದ್ಯುತ್ ಉತ್ಪಾದಕರುಗಳಿಂದ ಖರೀದಿಸಲಾಗುತ್ತಿದ್ದು ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ. ಅಲ್ಲದೇ, ರಾಜ್ಯ ಸರ್ಕಾರವು ವಿದ್ಯುತ್ ಕೊರತೆಯನ್ನು ನೀಗಲು ಹಾಗೂ ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಹೊಂದಲು ದೀರ್ಘಾವಧಿ ಯೋಜನೆಗಳನ್ನು ರೂಪಿಸಿದ್ದು ಕ.ವಿ.ನಿ.ನಿ., ಹಾಗೂ ಪಿ.ಸಿ.ಕೆ.ಎಲ್. ವತ್ತಿಯಿಂದ ಕೈಗೊಳ್ಳಲಾಗುತ್ತಿರುವ ಯೋಜನೆಗಳ ವಿವರಗಳನ್ನು ಅನುಬಂಧ–2 ರಲ್ಲಿ ಒದಗಿಸಲಾಗಿದೆ.

ಇ) ರಾಜ್ಯದಲ್ಲಿ ವಿದ್ಯುತ್ ಕೊರತೆ ತೀವ್ರವಾಗಿದ್ದು, ರೈತರ ನೀರಾವರಿ ಪಂಪುಸೆಟ್ಟುಗಳಿಗೆ ಪ್ರತಿ ದಿನ 3 ಫೇಸ್ 6ಗಂಟೆಗಳ ವಿದ್ಯುತ್‌ನ್ನು ಬ್ಯಾಚ್‌ಗಳಲ್ಲಿ ಪೂರೈಸಲಾಗುತ್ತಿದೆ. ಘೋಷಿತ ಅವಧಿಯ ವಿದ್ಯುತ್ ಪೂರೈಕೆಗಾಗಿ ರಾಜ್ಯ ಸರ್ಕಾರವು ಖಾಸಗಿ ವಿದ್ಯುತ್ ಉತ್ಪಾದಕರುಗಳಿಂದ 15 ಜೂನ್ 2013 ರವರೆಗೆ ವಿದ್ಯುತ್ ಖರೀದಿ ಮಾಡಲು ಒಪ್ಪಂದ ಮಾಡಿಕೊಳ್ಳಲಾಗಿದೆ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ.

ಅನುಬಂಧ–1

ವಿದ್ಯುತ್ ಕೊರತೆಯನ್ನು ನೀಗಿಸಲು 1630 ಮೆಗಾವ್ಯಾಟ್ ಮಧ್ಯಮಾವಧಿಯ ವಿದ್ಯುತ್ ಖರೀದಿಸಲು ಸೆಪ್ಟಂಬರ್ 2011 ರಿಂದ 15ನೇ ಜೂನ್ 2013ರವರೆಗೆ ವಿವಿಧ ಉತ್ಪಾದಕರಿಂದ ಖರೀದಿ ಒಪ್ಪಂದ ಮಾಡಿಕೊಂಡಿದ್ದು, ವಿವರಗಳು

ಕ್ರ ಸಂ	ಖಾಸಗಿ ವಿದ್ಯುತ್ ಉತ್ಪಾದಕರು	ಸಾಮರ್ಥ್ಯ (ಮೆ.ವ್ಯಾ)	ಷರಾ
1	ಮೆ//. ಜೆ.ಎಸ್.ಡಬ್ಲ್ಯು.ಪಿ.ಟಿ.ಸಿ	500	15 ಜೂನ್ 2013ರ ವರೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ
2	ಮೆ//. ಎನ್.ಇ.ಟಿ.ಎಸ್–100 ಮೆ.ವ್ಯಾ	100	15 ಜೂನ್ 2013ರ ವರೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ
3	ಮೆ//. ಎನ್.ಇ.ಟಿ.ಎಸ್–150 ಮೆ.ವ್ಯಾ	150	15 ಜೂನ್ 2013ರ ವರೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ
4	ಮೆ//. ಜೆ.ಯು.ವಿ.ಎನ್.ಎಲ್	500	15 ಜೂನ್ 2013ರ ವರೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ
5	ಮೆ//. ಬಿ.ಎಂ.ಎಂ.ಇಸ್ಪಾಟ್ ಲಿ.	30	15 ಜೂನ್ 2013ರ ವರೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ
6	ಮೆ//. ಜೆ.ಯು.ವಿ.ಎನ್.ಎಲ್	250*	15 ಜೂನ್ 2013ರ ವರೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ
7	ಮೆ//. ಪಿ.ಟಿ.ಸಿ ಇಂಡಿಯಾ ಲಿಮಿಟೆಡ್.	100** (ಬೆಳಗಿನ ಪೀಕ್ ಪವರ್)	ಡಿಸೆಂಬರ್ 2012 ರಿಂದ ಫೆಬ್ರವರಿ 2013ರ ವರೆಗೆ ಒಪ್ಪಂದ ಮಾಡಿಕೊಳ್ಳಲಾಗಿದೆ.
	ಒಟ್ಟು	**1630**	

* ಫೆಬ್ರವರಿ ತಿಂಗಳಲ್ಲಿ ಕಾರಿಡಾರ್ ಲಭ್ಯತೆ ಇರುವುದಿಲ್ಲ.

** ಡಿಸೆಂಬರ್ 2012 ತಿಂಗಳಲ್ಲಿ 18.4 ಮೆ.ವ್ಯಾ, ಜನವರಿ 2013 ತಿಂಗಳಲ್ಲಿ 70.18 ಮೆ.ವ್ಯಾ ವಿದ್ಯುತ್ ಲಭಿಸಿದ್ದು, ಫೆಬ್ರವರಿ ತಿಂಗಳಲ್ಲಿ ಕಾರಿಡಾರ್ ಲಭ್ಯತೆ ಇರುವುದಿಲ್ಲ.

ಅನುಬಂಧ–2

ರಾಜ್ಯ ಸರ್ಕಾರವು ವಿದ್ಯುತ್ ಕೊರತೆಯನ್ನು ನೀಗಲು ಹಾಗೂ ವಿದ್ಯುತ್ ಉತ್ಪಾದನೆಯಲ್ಲಿ ಸ್ವಾವಲಂಬನೆಯನ್ನು ಹೊಂದಲು ಪಿ.ಸಿ.ಕೆ.ಎಲ್.ವತಿಯಿಂದ ಕೈಗೊಳ್ಳಲಾಗುತ್ತಿರುವ ದೀರ್ಘಾವಧಿ ಯೋಜನೆಗಳ ವಿವರಗಳು

ಕ್ರ ಸ ಂ	ಯೋಜನೆಯ ಹೆಸರು	ರಾಜ್ಯದ ಪಾಲು (ಮೆ.ವ್ಯಾ. ಗಳಲ್ಲಿ)	ಇತ್ತೀಚಿನ ಮಾಹಿತಿಗಳು
1	ಕೂಡಗಿಯಲ್ಲಿ 4000 ಮೆ.ವ್ಯಾ. ಕಲ್ಲಿದ್ದಲು ವಿದ್ಯುತ್ ಯೋಜನೆ	2000	ಈ ಯೋಜನೆಯ ಮೊದಲ ಹಂತಕ್ಕಾಗಿ ಒಟ್ಟು 1900 ಎಕರೆ ಜಾಗವನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ.
2	ಹಾಸನ (1*660)	660	ಸರ್ಕಾರದ ಮಟ್ಟದಲ್ಲಿ ವಿದ್ಯುತ್ ಖರೀದಿ ಒಪ್ಪಂದಕ್ಕೆ ಅನುಮೋದನೆ ಕೋರಲಾಗಿದೆ.
3	ಬೆಳಗಾಂ, ಗದಗ ಮತ್ತು ದಾವಣಗೆರೆಯಲ್ಲಿ ಅನಿಲ ಆಧಾರಿತ ವಿದ್ಯುತ್ ಯೋಜನೆ, (2*350)	2100	ಆರ್.ಎಫ್.ಕ್ಯೂ ಹಂತದಲ್ಲಿ ಬಿಡ್‌ದಾರರ ಆಯ್ಕೆಯಾಗಿದ್ದು, ಆರ್.ಏಫ್.ಪಿ ಹಂತಕ್ಕೆ ಮುನ್ನ ಬೇಕಾಗಿರುವ ಅನಿಲಕ್ಕಾಗಿ ಕೇಂದ್ರ ಸರ್ಕಾರಕ್ಕೆ ಅರ್ಜಿಯನ್ನು ಸಲ್ಲಿಸಲಾಗಿದೆ.
4	ಗುಲ್ಬರ್ಗಾ ಕಲ್ಲಿದ್ದಲು ವಿದ್ಯುತ್ ಯೋಜನೆ ಘಟಕ–1 ಮತ್ತು 2 (2*660)	1,320	ಕೆ.ಇ.ಆರ್.ಸಿ ಆದೇಶದ ಪ್ರಕಾರ ಮಾರ್ಪಡಿಸಿದ ಆರ್.ಎಫ್.ಕ್ಯೂ ನೀಡಲಾಗಿದ್ದು, ಆರ್.ಎಫ್.ಕ್ಯೂ ಮೌಲ್ಯಮಾಪನಾ ಕಾರ್ಯ ಜಾರಿಯಲ್ಲಿರುತ್ತದೆ.
5	ಜುರಾಲ ಘಟಕ – 1ರಿಂದ 6 (6*39)=234 ಮೆ.ವ್ಯಾ	117	ಸದರಿ ಯೋಜನೆಯಲ್ಲಿ ಶೇ.50 ರಷ್ಟು ವಿದ್ಯುತ್‌ನ್ನು ರಾಜ್ಯಕ್ಕೆ ನೀಡುವ ಬಗ್ಗೆ ಎಂ.ಒ.ಯು ಸಹಿ ಮಾಡುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.
ಕ್ರ.	ಯೋಜನೆಯ ಹೆಸರು	ರಾಜ್ಯದ ಪಾಲು	ಇತ್ತೀಚಿನ ಮಾಹಿತಿಗಳು

ಸ ಂ		(ಮೆ.ವ್ಯಾ.ಗಳಲ್ಲಿ)	
6	ಘಟಪ್ರಭ ಕಲ್ಲಿದ್ದಲು ವಿದ್ಯುತ್ ಯೋಜನೆ ಘಟಕ – 1 ಮತ್ತು 2 (2*660)	1320	ಈ ಯೋಜನೆಗೆ ಗುರುತಿಸಲಾಗಿರುವ 1300 ಎಕರೆ ಜಾಗದ ಭೂ ಸ್ವಾಧೀನ ಪ್ರಕ್ರಿಯೆಯು ಜಾರಿಯಲ್ಲಿದೆ.
	ಒಟ್ಟು	**7517**	

ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ರಾಜ್ಯದಲ್ಲಿನ ವಿದ್ಯುತ್ ಕೊರತೆಯನ್ನು ನಿವಾರಿಸಲು ಕೈಗೊಳ್ಳಲಾಗುತ್ತಿರುವ ದೀರ್ಘಾವಧಿ ಯೋಜನೆಗಳ ವಿವರಗಳು:

ಅ) ಕಾಮಗಾರಿಗಳು ಚಾಲನೆಯಲ್ಲಿರುವ ವಿದ್ಯುತ್ ಯೋಜನೆಗಳು:

1) ಯರಮರಸ್ (2 x 800 ಮೆ.ವ್ಯಾ) ಹಾಗೂ ಯದ್ಲಾಪುರ (1 x 800 ಮೆ.ವ್ಯಾ) ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳು:

ಕರ್ನಾಟಕ ಸರ್ಕಾರವು ದಿನಾಂಕ: 03.01.2009ರ ಆದೇಶ ಪತ್ರ ಸಂಖ್ಯೆ ಇ ಎನ್ 90 ಪಿ ಪಿ ಸಿ 2008ರಲ್ಲಿ ಯರಮರಸ್ (2 x 800 ಮೆ. ವ್ಯಾ) ಹಾಗೂ ಯದ್ಲಾಪುರ (1 x 800 ಮೆ.ವ್ಯಾ) ಶಾಖೋತ್ಪನ್ನ ವಿದ್ಯುತ್ ಕೇಂದ್ರಗಳನ್ನು ಮೆ: ಬಿ.ಹೆಚ್.ಇ.ಎಲ್ ರವರ ಸಹಭಾಗಿತ್ವದೊಂದಿಗೆ ಕೈಗೆತ್ತಿಕೊಳ್ಳಲು ಅನುಮೋದನೆ ನೀಡಿದ್ದು, ಈ ಕುರಿತು ನಿಗಮವು ದಿನಾಂಕ. 12.01.2009 ರಂದು ಮೆ:ಬಿ.ಹೆಚ್.ಇ.ಎಲ್ ರವರೊಂದಿಗೆ ಒಡಂಬಡಿಕೆ ಪತ್ರಕ್ಕೆ ಸಹಿಹಾಕಿದೆ.

ಯರಮರಸ್ ಶಾಖೋತ್ಪನ್ನ ವಿದ್ಯುತ್ ಯೋಜನೆಯ ಅಂದಾಜು ಮೊತ್ತವು 9015 ಕೋಟಿ ರೂ. ಗಳಾಗಿದ್ದು, ಈ ಯೋಜನೆಯಿಂದ ಪ್ರತಿ ವರ್ಷ 11913 ದ.ಲ.ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಲಿದೆ. 6300 ಕೋಟಿ ರೂ.ಮೊತ್ತದ ಬಿಟಿಜಿ ಹಾಗೂ ಇತರೆ ಪ್ರಮುಖ ಪ್ಯಾಕೇಜ್‌ಗಳಿಗಾಗಿ ದಿನಾಂಕ: 09.04.2010 ರಂದು ಮೆ: ಬಿ.ಹೆಚ್.ಇ.ಎಲ್ ರವರಿಗೆ ಆದೇಶ ಪತ್ರ (LOA) ನೀಡಲಾಗಿದೆ. ಬಾಯ್ಲರ್ ಹಾಗೂ ಇ ಎಸ್ ಪಿ, ಆರ್ ಸಿ ಚಿಮಣಿ, ಕೋಲ್ ಹ್ಯಾಂಡ್ಲಿಂಗ್ ಹಾಗೂ ಆ್ಯಶ್ ಹ್ಯಾಂಡ್ಲಿಂಗ್ ಸಿಸ್ಟಂ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳು ಪ್ರಗತಿಯಲ್ಲಿವೆ. ದಿನಾಂಕ 09.11.2011 ರಂದು ಈ

ಯೋಜನೆಯ ಆರ್ಥಿಕ ವಹಿವಾಟಿನ (Financial closure) ಮುಕ್ತಾಯ ಸಮಾರಂಭವನ್ನು ನೆರವೇರಿಸಲಾಯಿತು.

ಯದ್ಲಾಪುರ ಶಾಖೋತ್ಪನ್ನ ವಿದ್ಯುತ್ ಯೋಜನೆಯ ಅಂದಾಜು ಮೊತ್ತವು 4960 ಕೋಟಿ ರೂ.ಗಳಾಗಿದ್ದು, ಈ ಯೋಜನೆಯಿಂದ ಪ್ರತಿ ವರ್ಷ 5957 ದ.ಲ.ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಲಿದೆ. ದಿನಾಂಕ: 25.09.2010 ರಂದು ಮೆ:ಬಿ.ಹೆಚ್.ಇ.ಎಲ್ ರವರಿಗೆ ಅನುಮತಿ ಪತ್ರ (LOI) ನೀಡಲಾಗಿದೆ. ಯೋಜನೆಗಾಗಿ ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯದಿಂದ ಅನುಮತಿಯನ್ನು ನಿರೀಕ್ಷಿಸಲಾಗಿದ್ದು, ಅನುಮತಿ ದೊರೆತ ನಂತರ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

2) ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ 3 ನೇ ಘಟಕ (1 x 700 ಮೆ.ವ್ಯಾ):

ಕರ್ನಾಟಕ ಸರ್ಕಾರವು ಬಳ್ಳಾರಿ ಶಾಖೋತ್ಪನ್ನ ವಿದ್ಯುತ್ ಕೇಂದ್ರದ 3 ನೇ ಘಟಕದ (1 x 700 ಮೆ. ವ್ಯಾ) ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಅನುಮತಿ ನೀಡಿದೆ. ಈ ಯೋಜನೆಯ ಅಂದಾಜು ಮೊತ್ತವು 4686 ಕೋಟಿ ರೂ.ಗಳಾಗಿದ್ದು, ಈ ಯೋಜನೆಯಿಂದ ಪ್ರತಿ ವರ್ಷ 5212 ದ.ಲ.ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಲಿದೆ. ಅಂತರಾಷ್ಟ್ರೀಯ ಸ್ಪರ್ಧಾತ್ಮಕ ಸವಾಲಿನ ಟೆಂಡರ್ ಆಧಾರದ ಮೇಲೆ ಸಂಧಾನದ ನಂತರ ಒಪ್ಪಿದ ಮೊತ್ತವಾದ 3700 ಕೋಟಿ ರೂ.ಗಳ ಇ.ಪಿ.ಸಿ. ಕಾಮಗಾರಿಗಳಿಗಾಗಿ ಮೆ:ಬಿ.ಹೆಚ್.ಇ.ಎಲ್ ರವರಿಗೆ ದಿನಾಂಕ: 28.09.2010 ರಂದು ಆದೇಶ ಪತ್ರ (LOA) ನೀಡಲಾಗಿದ್ದು, ಘಟಕದ ಅನುಷ್ಠಾನ ಅವಧಿಯು 44 ತಿಂಗಳುಗಳಾಗಿರುತ್ತದೆ. ಬಾಯ್ಲರ್ ಹಾಗೂ ಇ ಎಸ್ ಪಿ, ಆರ್ ಸಿ ಚಿಮಣಿ, ಕೋಲ್ ಹ್ಯಾಂಡ್ಲಿಂಗ್ ಸಿಸ್ಟಂ, ಕೂಲಿಂಗ್ ಟವರ್ ಹಾಗೂ ಇತರೆ ಸಂಬಂಧಿತ ಕಾಮಗಾರಿಗಳು ಪ್ರಗತಿಯಲ್ಲಿವೆ.

ಆ) ಇತರೆ ಹೊಸ ವಿದ್ಯುತ್ ಯೋಜನೆಗಳು :

1) ಛತ್ತೀಸ್‌ಗಢದ ಶಾಖೋತ್ಪನ್ನ ವಿದ್ಯುತ್ ಯೋಜನೆ : (1600 ಮೆ.ವ್ಯಾ)

ಕರ್ನಾಟಕ ಸರ್ಕಾರವು ತನ್ನ ಆದೇಶ ಪತ್ರ ಸಂಖ್ಯೆ: ಇಎನ್ 134 ಪಿಪಿಸಿ 2008, ದಿನಾಂಕ: 04.06.2009 ರಲ್ಲಿ ಘಟಕಗಳ ಸಾಮರ್ಥ್ಯವನ್ನು ಪರಿಷ್ಕರಿಸಿದ್ದು, ಪ್ರಥಮ ಹಂತದಲ್ಲಿ 800 ಮೆ.ವ್ಯಾ ಸಾಮರ್ಥ್ಯದ ಎರಡು ಘಟಕಗಳನ್ನು ಹಾಗೂ ಎರಡನೇ ಹಂತದಲ್ಲಿ 800 ಮೆ.ವ್ಯಾ ಸಾಮರ್ಥ್ಯದ ಒಂದು ಘಟಕವನ್ನು ಕೈಗೆತ್ತಿಕೊಳ್ಳಲು ಅನುಮೋದನೆ ನೀಡಿದೆ. ಈ ಯೋಜನೆಯ ಅಂದಾಜು ಮೊತ್ತವು 9015 ಕೋಟಿ ರೂ.ಗಳಾಗಿದ್ದು (ಪ್ರಥಮ ಹಂತ), ಈ ಯೋಜನೆಯಿಂದ ಪ್ರತಿ ವರ್ಷ 11914 ದ.ಲ.ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಲಿದೆ. ಯೋಜನೆಗಾಗಿ ಛತೀಸ್‌ಗಢ ಸರ್ಕಾರವು 1016.23 ಎಕರೆಯಷ್ಟು ಖಾಸಗಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದ್ದು, ಭೂ ಮಾಲೀಕರಿಗೆ ಪರಿಹಾರ ಧನವನ್ನು ವಿತರಿಸುವ ಕಾರ್ಯವು ಪ್ರಗತಿಯಲ್ಲಿದೆ. ಛತೀಸ್‌ಗಢ ಸರ್ಕಾರವು ಯೋಜನೆಗಾಗಿ 52 ದಶ ಲಕ್ಷ ಘನ ಮೀಟರ್ ಗಳಷ್ಟು ನೀರನ್ನು ಹಂಚಿಕೆ ಮಾಡಿದೆ. ಯೋಜನೆಯಿಂದ ಪರಿಸರದ ಮೇಲುಂಟಾಗುವ ಪರಿಣಾಮಗಳ ಕುರಿತ ಅಧ್ಯಯನ ಕಾರ್ಯವು ಪೂರ್ಣಗೊಂಡಿದೆ. ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯದ ಒಪ್ಪಿಗೆಯನ್ನು ಪಡೆಯುವ ಸಲುವಾಗಿ ದಿನಾಂಕ: 04.09.2010 ರಂದು ಅರ್ಜಿಯನ್ನು ಸಲ್ಲಿಸಲಾಗಿದೆ.

2) ಅನಿಲ ಆಧಾರಿತ ಬಿಡದಿ ಸಂಯುಕ್ತ ಆವರ್ತಕ ವಿದ್ಯುತ್ ಸ್ಥಾವರ (700 ಮೆ.ವ್ಯಾ $\pm$ 20%)

ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಬಿಡದಿಯಲ್ಲಿ 2500 ಕೋಟಿ ರೂ. ಅಂದಾಜು ವೆಚ್ಚದೊಂದಿಗೆ 700 ಮೆ.ವ್ಯಾ $\pm$ 20% ಸಾಮರ್ಥ್ಯದ ಅನಿಲ ಆಧಾರಿತ ಸಂಯುಕ್ತ ಆವರ್ತಕ ವಿದ್ಯುತ್ ಸ್ಥಾವರವನ್ನು ಅನುಷ್ಠಾನಗೊಳಿಸಲು ಯೋಜಿಸಿದ್ದು, ಈ ಯೋಜನೆಯಿಂದ ಪ್ರತಿ ವರ್ಷ 5212 ದ.ಲ.ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಲಿದೆ. ಪ್ರಾರಂಭಿಕ ಕಾರ್ಯಗಳಾದ ಭೂಸ್ವಾಧೀನ, ಸ್ಥಾವರದ ಸುತ್ತಲಿನ ಕಾಂಪೌಂಡ್ ಗೋಡೆ ನಿರ್ಮಾಣ ಹಾಗೂ ಇತರೆ ಕಾರ್ಯಗಳು ಈಗಾಗಲೇ ಪೂರ್ಣಗೊಂಡಿವೆ. ಭಾರತ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯದ

ಒಪ್ಪಿಗೆಯನ್ನೊಳಗೊಂಡಂತೆ ಯೋಜನೆಗೆ ಅವಶ್ಯವಿರುವ ಎಲ್ಲಾ ಶಾಸನಬದ್ದ ಒಪ್ಪಿಗೆಗಳನ್ನು ಪಡೆಯಲಾಗಿದೆ. ಕರ್ನಾಟಕ ಸರ್ಕಾರವು ಅನಿಲ ಸಾಗಾಣಿಕೆಗಾಗಿ ಮೆ: ಗೇಲ್ ರವರೊಂದಿಗೆ ಒಪ್ಪಂದ ಮಾಡಿಕೊಳ್ಳಲು ಅನುಮೋದನೆಯನ್ನು ನೀಡಿದೆ. ಇಪಿಸಿ ಕಾಮಗಾರಿಗಳಿಗೆ ಸಂಬಂಧಿಸಿದ ದರಗಳ ಬಿಡ್ಸ್‌ಗಳನ್ನು ದಿನಾಂಕ: 10.10.2012 ರಂದು ತೆರೆಯಲಾಗಿದೆ.

3) ಅನಿಲ ಆಧಾರಿತ ತದಡಿ ಸಂಯುಕ್ತ ಆವರ್ತಕ ವಿದ್ಯುತ್ ಸ್ಥಾವರ (2100 ಮೆ.ವ್ಯಾ)

ಕರ್ನಾಟಕ ಸರ್ಕಾರವು ತನ್ನ ಆದೇಶ ಪತ್ರ ಸಂಖ್ಯೆ:ಸಿಐ 222 ಎಸ್‌ಪಿಐ 2009, ದಿನಾಂಕ: 16.11.2009ರಲ್ಲಿ 2100 ಮೆ.ವ್ಯಾ. ಸಾಮರ್ಥ್ಯದ ಅನಿಲ ಆಧಾರಿತ **"ತದಡಿ ಸಂಯುಕ್ತ ಆವರ್ತಕ ವಿದ್ಯುತ್ ಸ್ಥಾವರ"**ವನ್ನು ರಾಜ್ಯದಲ್ಲಿ ಸ್ಥಾಪಿಸಲು ಅನುಮತಿ ನೀಡಿದೆ. ಈ ಯೋಜನೆಯ ಅಂದಾಜು ಮೊತ್ತವು 7350 ಕೋಟಿ ರೂ. ಗಳಾಗಿದ್ದು, ಈ ಯೋಜನೆಯಿಂದ ಪ್ರತಿ ವರ್ಷ 15637 ದ.ಲ.ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಲಿದೆ. ಯೋಜನೆಯ ಪೂರ್ವ ಸಾಧ್ಯಾಸಾಧ್ಯತೆಗಳ ವರದಿಯನ್ನು ತಯಾರಿಸಲಾಗಿದ್ದು, ವಿವಿಧ ಇಲಾಖೆಗಳಿಂದ ಶಾಸನಬದ್ಧ ಒಪ್ಪಿಗೆಯನ್ನು ಪಡೆಯಲು ಕ್ರಮ ಕೈಗೊಳ್ಳಲಾಗಿದೆ. ಈ ಯೋಜನೆಗಾಗಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು 400 ಎಕರೆ ಭೂಮಿಯನ್ನು ಹಂಚಿಕೆಮಾಡಿದೆ. ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಸಾರ್ವಜನಿಕರಿಂದ ಅಹವಾಲು ಸ್ವೀಕರಿಸುವ ಸಭೆಯನ್ನು ನಡೆಸುವಂತೆ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯನ್ನು ಕೋರಿದೆ.

4) ಗುಂಡ್ಯಾ ಜಲವಿದ್ಯುತ್ ಯೋಜನೆ : (400 ಮೆ.ವ್ಯಾ)

ಹಾಸನ/ದಕ್ಷಿಣ ಜಿಲ್ಲೆಯಲ್ಲಿ 400 ಮೆ.ವ್ಯಾ. ಸ್ಥಾಪಿತ ಸಾಮರ್ಥ್ಯದ ಗುಂಡ್ಯಾ ಜಲವಿದ್ಯುತ್ ಯೋಜನೆಯನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. 1330.00 ಕೋಟಿ ರೂ.ಗಳ ಈ ಯೋಜನೆಯಿಂದ ವಾರ್ಷಿಕ ಒಟ್ಟು 1002 ದ.ಲ.ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಲಿದೆ. ಯೋಜನೆಯ ಮೊದಲ ಹಂತಕ್ಕಾಗಿ (1 x 200 ಮೆ.ವ್ಯಾ) ಕೇಂದ್ರೀಯ ವಿದ್ಯುತ್

ಪ್ರಾಧಿಕಾರದಿಂದ ತಾಂತ್ರಿಕ–ವಾಣಿಜ್ಯ ಒಪ್ಪಿಗೆಯನ್ನು ಪಡೆಯಲಾಗಿದ್ದು, ಭಾರತ ಸರ್ಕಾರದ ಅರಣ್ಯ ಮತ್ತು ಪರಿಸರ ಸಚಿವಾಲಯದ ಅನುಮತಿಯನ್ನು ನಿರೀಕ್ಷಿಸಲಾಗುತ್ತಿದೆ.

5) ಶಿವನಸಮುದ್ರ ಜಲ ವಿದ್ಯುತ್ ಯೋಜನೆ : (345 ಮೆ.ವ್ಯಾ)

ಕರ್ನಾಟಕ ಸರ್ಕಾರವು ತನ್ನ ಆದೇಶ ಪತ್ರ ಸಂಖ್ಯೆ: ಇಎನ್ 74 ಪಿಪಿಸಿ 2008, ದಿನಾಂಕ: 07.06.2010ರಲ್ಲಿ 345 ಮೆ.ವ್ಯಾ. ಸಾಮರ್ಥ್ಯದ ವಿದ್ಯುತ್ ಸ್ಥಾವರವನ್ನು ಸ್ಥಾಪಿಸಲು ಅನುಮತಿ ನೀಡಿದೆ. ಈ ಯೋಜನೆಯ ಅಂದಾಜು ಮೊತ್ತವು 750 ಕೋಟಿ ರೂ.ಗಳಾಗಿದ್ದು, ಈ ಯೋಜನೆಯಿಂದ ಪ್ರತಿ ವರ್ಷ 1290 ದ.ಲ.ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಲಿದೆ. ಯೋಜನೆಯಿಂದ ಪರಿಸರದ ಮೇಲುಂಟಾಗುವ ಪರಿಣಾಮಗಳ ಕುರಿತ ಅಧ್ಯಯನ ಕಾರ್ಯವು ಪ್ರಗತಿಯಲ್ಲಿದೆ. ಯೋಜನೆಯ ಅನುಮತಿಗಾಗಿ ಕರ್ನಾಟಕ ಸರ್ಕಾರವು ವಿಸ್ತೃತ ಯೋಜನಾ ವರದಿಯನ್ನು ದಿನಾಂಕ: 30.03.2012 ರಂದು ಕೇಂದ್ರೀಯ ವಿದ್ಯುತ್ ಪ್ರಾಧಿಕಾರಕ್ಕೆ ಸಲ್ಲಿಸಿದೆ. ಈ ಕುರಿತು ಕೇಂದ್ರೀಯ ವಿದ್ಯುತ್ ಪ್ರಾಧಿಕಾರವು ಕೆಲವು ವಿವರಣೆಗಳನ್ನು ಕೋರಿದ್ದು, ಆ ವಿವರಗಳನ್ನು ನೀಡುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

6) ಮುನಿರಾಬಾದ್ ಜಲ ವಿದ್ಯುತ್ ಕೇಂದ್ರ, ಹೆಚ್ಚುವರಿ ಘಟಕ: (10 ಮೆ.ವ್ಯಾ):

10 ಮೆ ವ್ಯಾ. ಸಾಮರ್ಥ್ಯದ ಈ ಯೋಜನೆಯ ಅಂದಾಜು ಮೊತ್ತವು 44 ಕೋಟಿ ರೂ.ಗಳಾಗಿದ್ದು, ಈ ಯೋಜನೆಯಿಂದ ಪ್ರತಿ ವರ್ಷ 11 ದ.ಲ.ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಲಿದೆ. ದಿನಾಂಕ: 04.02.2012 ರಂದು M/s. Allonward-SSIPL-KR & Co.ರವರಿಗೆ ಆದೇಶ ಪತ್ರ ನೀಡಲಾಗಿದೆ. ಕಾಮಗಾರಿಗಳ ಚಾಲನೆಗಾಗಿ ಮುಖ್ಯ ಅಭಿಯಂತರು (ನೀರಾವರಿ), ಜಲಸಂಪನ್ಮೂಲ ಇಲಾಖೆ, ಮುನಿರಾಬಾದ್ ಇವರಿಂದ ಅನುಮತಿಯನ್ನು ನಿರೀಕ್ಷಿಸಲಾಗುತ್ತಿದೆ.

7) ಘಟಪ್ರಭ (20 ಮೆ.ವ್ಯಾ) :

20 ಮೆ.ವ್ಯಾ ಸಾಮರ್ಥ್ಯದ ಈ ಯೋಜನೆಯ ಅಂದಾಜು ಮೊತ್ತವು 99 ಕೋಟಿ ರೂ.ಗಳಾಗಿದ್ದು, ಈ ಯೋಜನೆಯಿಂದ ಪ್ರತಿ ವರ್ಷ 40 ದ.ಲ.ಯೂನಿಟ್‌ಗಳಷ್ಟು ವಿದ್ಯುತ್ ಉತ್ಪಾದನೆಯಾಗಲಿದೆ. ಈ ಯೋಜನೆಯ

ಕಾಮಗಾರಿಗಳಿಗಾಗಿ ಟೆಂಡರ್ ಕರೆಯಲಾಗಿತ್ತು. ಆದರೆ ಮಾನ್ಯ ಉಚ್ಚನ್ಯಾಯಾಲಯದ ಆದೇಶದ ಪ್ರಕಾರ ಟೆಂಡರ್ ರದ್ದುಪಡಿಸಲಾಗಿದೆ.

ಇ) **ಸೋಲಾರ್ ವಿದ್ಯುತ್ ಯೋಜನೆಗಳು:**

ಇದುವರೆವಿಗೂ ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಒಟ್ಟು 14.00 ಮೆಗಾ ವ್ಯಾಟ್‌ಗಳಷ್ಟು ಸಾಮರ್ಥ್ಯದ ಸೌರವಿದ್ಯುತ್ತನ್ನು ರಾಜ್ಯದ ವಿದ್ಯುತ್ ಜಾಲಕ್ಕೆ ಸೇರ್ಪಡೆಗೊಳಿಸಿದೆ. ಮುಂದುವರಿದಂತೆ, ರಾಜ್ಯ ಸರ್ಕಾರವು ಹಾವೇರಿ ಜಿಲ್ಲೆಯ ಕಾಗಿನೆಲೆ ಹಾಗೂ ಚಿಂದಾಮರಗಳಲ್ಲಿ ಪ್ರತಿ 5 ಮೆಗಾ ವ್ಯಾಟ್ ಸಾಮರ್ಥ್ಯದ ಎರಡು ಸೌರ ವಿದ್ಯುತ್ ಸ್ಥಾವರಗಳನ್ನು ಸ್ಥಾಪಿಸಲು ಕರ್ನಾಟಕ ವಿದ್ಯುತ್ ನಿಗಮಕ್ಕೆ ಹಂಚಿಕೆಮಾಡಿದೆ. ಈ ಯೋಜನೆಗಳನ್ನು ಅನುಷ್ಠಾನಗೊಳಿಸುವ ಪ್ರಕ್ರಿಯೆಯು ಪ್ರಗತಿಯಲ್ಲಿದೆ.

ಅಧ್ಯಕ್ಷರು: ನೀವು ಕೇಳಿ. ಉತ್ತರ ಒದಗಿಸಲಾಗಿದೆ ಎಂದು ಹೇಳಿದರು.

ಶ್ರೀ ಎಂ.ಸತ್ಯನಾರಾಯಣ: ಸ್ವಾಮಿ, ಉತ್ತರವನ್ನು ಒದಗಿಸಲಾಗಿದೆ. ವಿದ್ಯುತ್ ಉತ್ಪಾದನೆ ದಿನೇ ದಿನೇ ಕುಂಠಿತವಾಗುತ್ತಿದೆ. ಗ್ರಾಮಾಂತರ ಪ್ರದೇಶಗಳಲ್ಲಂತೂ ವಿದ್ಯುತ್ ಅನ್ನು ನೋಡುವುದೇ ಕಷ್ಟವಾಗಿದೆ. ನೀವು 6 ಗಂಟೆಗಳ ಕಾಲ ಕರೆಂಟ್ ಕೊಡುತ್ತೇವೆಂದು ಉತ್ತರದಲ್ಲಿ ಕೊಟ್ಟಿದ್ದೀರಿ. ಆದರೆ ನೀವು ಎಲ್ಲಿಯೂ 6 ಗಂಟೆಗಳ ಕಾಲ ಕರೆಂಟ್ ಕೊಡುತ್ತಿಲ್ಲ. ನಾನು ಹಳ್ಳಿಯಲ್ಲಿಯೇ ವಾಸವಿರುವುದರಿಂದ, ವಿದ್ಯುತ್ತ್‌ನ್ನು ಬಹಳಷ್ಟು ಕಷ್ಟಪಟ್ಟು ಪಡುಕಬೇಕಾದಂಥ ಪರಿಸ್ಥಿತಿಯಿದೆ. ಸರ್ಕಾರ ಬಂದಾಗಿನಿಂದಲೂ ವಿದ್ಯುತ್ ಉತ್ಪಾದನೆ ಮಾಡುತ್ತೇವೆ, ಸುಧಾರಿಸುತ್ತೇವೆ ಎನ್ನುವುದರಲ್ಲೇ ಇದ್ದೀರಿ ವಿನಹ ಯಾವುದೇ ಪ್ರಯತ್ನವನ್ನು ವಿದ್ಯುತ್ ಸುಧಾರಣೆ ಬಗ್ಗೆ ತಾವು ಮಾಡಲಿಲ್ಲ. ಅವತ್ತಿನಿಂದ ಇವತ್ತಿನವರೆಗೂ ದಿನೇ ದಿನೇ ಕೂಂಠಿತವಾಗುತ್ತಿದೆ. ಮಕ್ಕಳುಗಳಿಗೆ ಪರೀಕ್ಷೆಗಳು ಹತ್ತಿರ ಬರುತ್ತಿವೆ. ಮಕ್ಕಳಿಗೆ ಓದುವುದಕ್ಕೆ ಕರೆಂಟ್ ಇರುವುದಿಲ್ಲ. ರೈತರಿಗೆ ಬೆಳೆಯುವುದಕ್ಕೆ ತಾವು 3–ಫೇಸ್ ಕರೆಂಟ್ ಕೊಡುತ್ತೇವೆಂದು ಹೇಳಿದ್ದೀರಿ, ಎಲ್ಲಿ ಕೊಡುತ್ತಿದ್ದೀರಿ ಸ್ವಾಮಿ? ಹಳ್ಳಿಗಳಲ್ಲಿ 2 ಗಂಟೆಗಳ ಕಾಲ ವಿದ್ಯುತ್ ಸಿಗುತ್ತಾ ಇಲ್ಲ. ಅದರ ಬಗ್ಗೆ ತಾವು ಏನು ಮಾತನಾಡಿದ್ದೀರೋ, ಅದರಂತೆ 6 ಗಂಟೆಗಳ ಕಾಲ ಕರೆಂಟ್ ಕೊಡಬೇಕು. ಮಕ್ಕಳ ವಿದ್ಯಾಭ್ಯಾಸಕ್ಕೆ ಅನುಕೂಲವಾಗುವಂಥ ಒಂದು ವಾತಾವರಣವನ್ನು ನಿರ್ಮಾಣ ಮಾಡಬೇಕು.

ಕರೆಂಟ್ ಇಲ್ಲದಿದ್ದರೆ ಮಕ್ಕಳಿಗೆ ಓದುವುದಕ್ಕೆ ಆಗುವುದಿಲ್ಲ. ತಾವು ಅನುಕೂಲ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಶಿವರಾಜ್ಎಸ್.ತಂಗಡಗಿ: ಮಾನ್ಯ ಅಧ್ಯಕ್ಷರೆ, ಕರೆಂಟ್‌ಗೆ ಸಂಬಂಧಪಟ್ಟಂತೆ ನಾನು ಸ್ವಲ್ಪ ಮಾತನಾಡುತ್ತೇನೆ.

ಅಧ್ಯಕ್ಷರು: ಕರೆಂಟ್‌ದ್ದೇ, ತಾವು ರಾಜ್ಯಪಾಲರ ಭಾಷಣದಲ್ಲಿ ಮಾತನಾಡಿ.

ಶ್ರೀ ಪಿ.ಎಂ.ನರೇಂದ್ರಸ್ವಾಮಿ: ಅಧ್ಯಕ್ಷರೆ, ನನಗೆ ಮಾತನಾಡಲು ಅವಕಾಶ ಕೊಡಿ.

ಅಧ್ಯಕ್ಷರು: ನಿಮ್ಮ ಹೆಸರನ್ನು ಕರೆದಾಗ ನೀವು ಬರಲಿಲ್ಲ.

ಶ್ರೀ ಉಮೇಶ್ ವಿ.ಕತ್ತಿ (ಮಾನ್ಯ ಮುಖ್ಯಮಂತ್ರಿಯವರ ಪರವಾಗಿ): ಮಾನ್ಯ ಅಧ್ಯಕ್ಷರೆ, ಈಗಾಗಲೇ ಸವಿಸ್ತಾರ ಮಾಹಿತಿಯನ್ನು ಕೊಡಲಾಗಿದೆ. ವಿದ್ಯುತ್ ಕೊರತೆ ಬಗ್ಗೆ ಕೇಳಿದ್ದಾರೆ. ಹೌದು ಕೊರತೆಇದೆ, ನಿಜ ಎಂದು ನಾನು ಉತ್ತರ ಕೊಟ್ಟಿದ್ದೇನೆ. ಆದರೂ ಕಳೆದ 4 ವರ್ಷಗಳಲ್ಲಿ 2008–09ರಿಂದ 2012–13ರವರೆಗೆ ವಿದ್ಯುತ್ ಹೊಸದಾಗಿ ಉತ್ಪಾದನೆ ಮಾಡುವಲ್ಲಿ 4593 ಮೆಗಾ ವ್ಯಾಟ್‌ಗಳನ್ನು ಹೆಚ್ಚಿಗೆ ಉತ್ಪಾದನೆ ಮಾಡಿ gridಗೆ add ಮಾಡಿದ್ದೇವೆ. ಒಂದು ಕಡೆ ವಿದ್ಯುತ್ ಕೊರತೆ ಇರುವುದು ನಿಜ. ಅದು ಆಗದೇ ಉಳಿಕೆ ಇದ್ದಂಥ ವಿದ್ಯುತ್ತನ್ನು ಪೂರೈಕೆ ಮಾಡಲು ಆಗದೇ ಇರುವ ಕಾರಣದಿಂದ ಸಹ ಇವತ್ತು ವಿದ್ಯುತ್‌ನಲ್ಲಿ ಸ್ವಾವಲಂಬನೆ ತರಬೇಕೆನ್ನುವ ದೃಷ್ಟಿಯಿಂದ ಉತ್ಪಾದನೆಯಲ್ಲಿ 4593 ಮೆಗಾವ್ಯಾಟ್‌ನ್ನು ಕಳೆದ 4 ವರ್ಷಗಳಲ್ಲಿ ಹೆಚ್ಚಿನ ಉತ್ಪಾದನೆ ಮಾಡಿ gridಗೆ add ಮಾಡಿ ವಿದ್ಯುತ್‌ನ್ನು ಸರಿ ಮಾಡುವಂಥ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಅದಲ್ಲದೆ. Private company ಗಳಿಂದ 1602 ರಷ್ಟು ವಿದ್ಯುತ್ತನ್ನು ಖರೀದಿ ಮಾಡಿ ರಾಜ್ಯಾದ್ಯಂತ ವಿದ್ಯುತ್ ಹಂಚಿಕೆ ಮಾಡುತ್ತಿದ್ದೇವೆ. ಇದಲ್ಲದೆ ವಿಶೇಷವಾಗಿ ಗ್ರಾಮಾಂತರ ಪ್ರದೇಶದಲ್ಲಿರುವಂಥ ಮಕ್ಕಳ ವಿದ್ಯಾಭ್ಯಾಸಕ್ಕೆ ಮತ್ತು ಕೃಷಿಗೆ ವಿಶೇಷ ಆದ್ಯತೆ ಕೊಟ್ಟು 6 ಗಂಟೆಗಳ ಕಾಲ ಕೃಷಿಗೆ ವಿದ್ಯುತ್ ಕೊಡಬೇಕು ಮತ್ತು peak hoursನಲ್ಲಿ ಮಕ್ಕಳ ವಿದ್ಯಾಭ್ಯಾಸಕ್ಕೆ ವಿದ್ಯುತ್ತನ್ನೂ ಸರಿಯಾಗಿ ಕೊಡಬೇಕೆಂದು ತೀರ್ಮಾನ ಮಾಡಿ ಪೂರೈಕೆ ಮಾಡುವಂಥ ಪ್ರಯತ್ನವನ್ನು ಮುಂದುವರೆಸುತ್ತಿದ್ದೇವೆ. ಈ ರೀತಿ ರಾಜ್ಯದಲ್ಲಿ ಒಂದು ಕಡೆ ವಿದ್ಯುತ್ ಕೊರತೆಯಿದ್ದರೂ ಸಹ ವಿದ್ಯುತ್ ಕೊಡುವಂಥ

ಪ್ರಯತ್ನವನ್ನು ಮಾಡಿದ್ದೇವೆ. ಇನ್ನು ಎರಡನೆಯ ಪ್ರಶ್ನೆ ತಾವು ಕೇಳಿರುವಂಥದ್ದು, ವಿದ್ಯುತ್ ಕೊರತೆಯಿಂದ ಆಹಾರ ಉತ್ಪಾದನೆಗೆ ಕೊರತೆಯಾಗಿದೆ ಎಂದು ಕೇಳಿದ್ದೀರಿ. ಆದರೆ ಕಳೆದ 4 ವರ್ಷಗಳಲ್ಲಿ ಹಿಂದೆ 2007–08ರಲ್ಲಿ 1 ಲಕ್ಷ 5 ಸಾವಿರ ಟನ್ ಆಹಾರ ಉತ್ಪಾದನೆಯಾಗಿತ್ತು. ಕಳೆದ 4 ವರ್ಷಗಳಲ್ಲಿ ಹಂತ ಹಂತವಾಗಿ ಇವತ್ತು 40 ಲಕ್ಷ ಟನ್ ಆಹಾರ ಉತ್ಪಾದನೆ ಮಾಡಿ ಅಂದರೆ ವಿದ್ಯುತ್‌ನ ಪೂರೈಕೆ ಸರಿಯಾದರೆ ಆಹಾರ ಉತ್ಪಾದನೆ ಸರಿಯಾಗುತ್ತದೆ ಎನ್ನುವಂಥದ್ದು. ಈ ಬರಗಾಲದಲ್ಲಿಯೂ ಸಹ ವಿದ್ಯುತ್ ಉತ್ಪಾದನೆ ಮಾಡಿ ಪೂರೈಕೆ ಮಾಡುವಂಥ ಪ್ರಯತ್ನವನ್ನು ಮಾಡಿದ್ದೇವೆ.

(ಗೊಂದಲ)

ಶ್ರೀ ಶಿವರಾಜ್ ಎಸ್.ತಂಗಡಗಿ(ಕನಕಗಿರಿ):– ಮಾನ್ಯ ಅಧ್ಯಕ್ಷರೆ, ಅವರು ಸದನಕ್ಕೆ ಸುಳ್ಳು ಮಾಹಿತಿಯನ್ನು ನೀಡುತ್ತಿದ್ದಾರೆ. ದಿನಕ್ಕೆ ಒಂದೂವರೆ ಗಂಟೆಗಳ ಕಾಲವೂ ವಿದ್ಯುತ್ ಕೊಡುತ್ತಿಲ್ಲ.

ಶ್ರೀ ಉಮೇಶ್ ವಿ.ಕತ್ತಿ (ಮಾನ್ಯ ಮುಖ್ಯಮಂತ್ರಿಗಳ ಪರವಾಗಿ):– 6 ಗಂಟೆಗಳ ಕಾಲ ಕೃಷಿಗೆ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕೆಂದು ಕೊಡುತ್ತಿದ್ದೇವೆ. ಕಳೆದ 8–10 ದಿನಗಳಲ್ಲಿ ತೊಂದರೆಯಾಗಿದೆ. ಮುಂದಿನ ದಿನಗಳಲ್ಲಿ ಇದನ್ನು ಸರಿಪಡಿಸುವ ವ್ಯವಸ್ಥೆ ಮಾಡಲಾಗುತ್ತದೆ.

(ಗೊಂದಲ)

ಡಾ:ಶರಣಪ್ರಕಾಶ್ ಆರ್.ಪಾಟೀಲ್(ಸೇಡಂ):– ಅಧ್ಯಕ್ಷರೆ, ಈಗ ಇಂಧನ ಸಚಿವರು ಯಾರು ಎಂದು ಗೊತ್ತಾಗುತ್ತಿಲ್ಲ.

ಶ್ರೀ ಶಿವರಾಜ್ ಎಸ್.ತಂಗಡಗಿ:– ಮಾನ್ಯ ಅಧ್ಯಕ್ಷರೆ, ತಪ್ಪು ಮಾಹಿತಿ ಕೊಡುತ್ತಿದ್ದಾರೆ. Power ಇಲ್ಲ ಸುಮ್ಮನೆ ಸುಳ್ಳು ಏಕೆ ಹೇಳುತ್ತೀರಿ? 6 ಗಂಟೆಗಳ ಕಾಲ ಎಲ್ಲಿ ವಿದ್ಯುತ್ ಕೊಡುತ್ತಿದ್ದೀರಿ? ಒಂದೂವರೆ ಗಂಟೆ ಕೂಡಾ ಕೊಡುತ್ತಿಲ್ಲ.

(ಗೊಂದಲ)

ಅಧ್ಯಕ್ಷರು:– ಶ್ರೀ ನರೇಂದ್ರಸ್ವಾಮಿ ಯವರು ಕೇಳಿ.